† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕಳಸದಲ್ಲಿ ರೋಗೋಪಯೋಗಿ ಪ್ರವಾಸಿಮಂದಿರ ಯಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಅಲ್ಲಿ ಈಗ ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಸೇರಿದ ಪ್ರವಾಸಿಮಂದಿರ ಇದೆ. ಅದನ್ನು ರೋಗೋಪಯೋಗಿ ಇರಾಖೆಗೆ ತೆಗೆದು ಕೊಳ್ಳಬೇಕೆಂದು ಕೇಳಿದಾಗ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಒಂದು ಠರಾವನ್ನು ಮಾಡಿ ನಾವೇ ಇದನ್ನು ಇಟ್ಟುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಲಿ ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧೀನದಲ್ಲಿರತಕ್ಕ ಪ್ರವಾಸಿಮಂದಿರದಲ್ಲಿ ಸಾಕಾದಷ್ಟು ಸ್ಥಳಾವಕಾಶ ಇಲ್ಲದೇ ಇದ್ದು, ವಾಸಕ್ಕೂ ಕೂಡ ಅನುಕೂಲವಾಗಿಲ್ಲದೇ ಚಿಕ್ಕದ್ದಾಗಿರುವುದರಿಂದಲೂ ಅಲ್ಲದೇ ಈ ಪ್ರದೇಶದಲ್ಲಿ ಕುದುರೆಮುಖ ಕಬ್ಬಿಣದ ಅದಿರು ತೆಗೆಯುವ ಯೋಜನೆಯು ಪ್ರಾರಂಭವಾಗುವುದರಿಂದ ಒಂದು ದೊಡ್ಡ ಪ್ರವಾಸಿಮಂದಿರವನ್ನು ಕಟ್ಟಿಸುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕುದುರೆಮುಖ ಕಬ್ಬಿಣದ ಅದಿರು ತೆಗೆಯುವ ಯೋಜನೆಯ ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡಿ ಇದನ್ನು ಪರಿಶೀಲಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಕುದುರೆಮುಖ ಕಬ್ಬಿಣದ ಅದಿರು ತೆಗೆಯುವ ಯೋಜನೆಯು ದೊಡ್ಡ ಪ್ರಮಾಣದಲ್ಲಿ ನಡೆಯುವುದರಿಂದ ಪ್ರವಾಸಿಗರಿಗೆ ಅನುಕೂಲವಾಗುವಂತಹ ಬಂಗಲೆಯನ್ನು ಕಟ್ಟಿಸುವಂತಹ ಯೋಜನೆ ಇದೆಯೆ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅಂಥ ಯೋಜನೆ ಹಾಕಿಕೊಂಡಿರುವುದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಪ್ರವಾಸಿಮಂದಿರದ ಬಗ್ಗೆ ಪ್ಲಾನು ಮತ್ತು ಎಸ್ಟಿಮೇಟಿನ ಬಗ್ಗೆ ವಿವರಗಳು ಇದ್ದರೆ ದಯವಿಟ್ಟು ಹೇಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ಲಾನು ಇಲ್ಲ, ಎಸ್ಟಿಮೇಟು ಇಲ್ಲ.

Additional Building to Travellers' Bungalow at Mudigere

56. SRI G. PUTTASWAMY (Mudigere).—Will the Minister for Public Works be pleased to state:—

(*a*) whether Government is aware that there is no sufficient accommodation in Travellers' Bungalow at Mudigere Town, Chickmagalur District;

(*b*) whether the Government intend to construct an additional building for providing accommodation to the travellers;

(*c*) if so, when ?

SRI M. MALLIKARJUNA SWAMY (Minister for Public Works).—

(*a*) *to* (*c*)—

There is no proposal at present to constuct an additional building to Travellers Bungalow at Mudigere. However, the matter will be examined in consultation with Kudremukh Iron Ore Project Authorities.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ರಾಜ್ಯದಲ್ಲಿ ಈಗಾಗಲೇ ಪ್ರವಾಸಿ ಮಂದಿರಗಳನ್ನು ನಿರ್ಮಿಸಿದ್ದೀರಿ, ಇದಕ್ಕೆ ಏನಾದರೂ ಯೋಜನೆಯನ್ನು ತಯಾರು ಮಾಡಿಕೊಂಡು ನಿರ್ಮಿಸಿದ್ದೀರಾ? ಉತ್ತರ ಕರ್ನಾಟಕದಲ್ಲಿ ಎಷ್ಟು ಪ್ರವಾಸಿ ಮಂದಿರಗಳನ್ನು ಕಟ್ಟಿಸಿದ್ದೀರಿ, ಹಳೇ ಮೈಸೂರಿನಲ್ಲಿ ಎಷ್ಟು ಪ್ರವಾಸಿ ಮಂದಿರಗಳನ್ನು ಕಟ್ಟಿಸಿದ್ದೀರಿ, ಇದಕ್ಕೆ ಎಷ್ಟು ಅಂದಾಜು ತಯಾರು ಮಾಡಿದ್ದೀರಾ ಎನ್ನುವುದರ ಬಗ್ಗೆ ವಿವರ ಹೇಳುತ್ತೀರಾ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದರಲ್ಲಿ ಹಳೇ ಮೈಸೂರಿನಲ್ಲಿ ಎಷ್ಟು ಪ್ರವಾಸಿ ಮಂದಿರಗಳನ್ನು ಕಟ್ಟಿಸಿದ್ದೀರಿ, ಹೊಸ ಮೈಸೂರಿನಲ್ಲಿ ಎಷ್ಟು ಪ್ರವಾಸಿ ಮಂದಿರಗಳನ್ನು ಕಟ್ಟಿಸಿದ್ದೀರಿ ಎಂದು ಪ್ರಶ್ನೆ ಉದ್ಭವವಾಗುವುದಿಲ್ಲ, ಮಾನ್ಯ ಸದಸ್ಯರು ಮೂಡಿಗೆರೆಗೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಹಾಕಿದ್ದಾರೆ, ಅಲ್ಲಿ ತಾರೋಕ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಇಂತಹ ಬಂಗಲೆಗಳ ಅವಶ್ಯಕತೆ ಇದೆ. ಮಂಗಳೂರು, ಕಡೂರು ಸ್ಪೆಷಲ್ ಪೈವೇಸ್ ಸಂಪರ್ಕ ಇದ್ದು ತಾಲೂಕು ಕೇಂದ್ರ ಆಗಿರುವುದರಿಂದ ಟ್ರಾವೆಲರ್ಸ್ ಬಂಗಲೋ ಈಗ ಅಲ್ಲಿ ಏನು ಇದೆ ಅದು ಸಾಲದು, ಅಲ್ಲದೇ ಕುದುರಮುಖ ಐರನ್ ಓರ್ ಯೋಜನೆ ಅಲ್ಲಿ ಆಗಿರುವುದರಿಂದ ಅಲ್ಲಿಗೆ ಹೆಚ್ಚಿಗೆ ಜನರು ಹೋಗಿ ಬರತಕ್ಕ ಸನ್ನಿವೇಶ ಒದಗಿರುವುದರಿಂದ ಈಗ ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ, ಇದನ್ನು ಕೂಡ ಕುದುರೆಮುಖ ಕಬ್ಬಿಣ ಆದುರಿನ ಯೋಜನೆಯ ಅಧಿಕಾರ ವರ್ಗದವರೊಡನೆ ಸಮಾಲೋಚನೆ ನಡೆಸಿ ಚರ್ಚೆ ಮಾಡಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ, ಅಲ್ಲಿ ಫಸ್ಟ್ ಕ್ಲಾಸ್ ಟಿ. ಬಿ. ಯನ್ನು ಏನಾದರೂ ಕಟ್ಟಿಸುತ್ತಿರಾ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ —ಯಾವ ಕ್ಲಾಸ್ ಮಾಡಬೇಕು ಎನ್ನುವುದನ್ನು ಸರ್ಕಾರ ಪರಿಶೀಲನೇ ಮಾಡುತ್ತದೆ.

MADAM SPEAKER.—Question numbers 115 and 307 may be taken up together.

Anomalies in Pay Commission's Report.

115. SRI T. R. SHAMANNA (Fort).—Will the Minister for Finance be pleased to state:—

(*a*) whether they are aware of some anomalies pointed out in Narayana Pai's Commission Report ;

(*b*) if so, the steps taken to remove those anomalies;

(*c*) when the recommendations of the Pay Commission Report will be implemented ?

SRI M. Y. GHORPADE (Minister for Finance).—

(*a*) Representations have been received from Government employees and Service Associations regarding alleged anomalies in the recommendations of the Pay Commission.

(*b*) An Official Committee has been set up with the following terms of reference:

(i) To examine representations regarding anomalies in the recommendations of the Pay Commission ;